ಸಿಸಿ.ನಂ.224/2021
ಪಿ ಡಬ್ಲ್ಯೂ-1

**ದಿಃ17.05.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

ಪಾಟೀ ಸವಾಲು:- ಆರೋಪಿ ಪರ Sri.K.C., ವಕೀಲರಿಂದಃ-

ನಾನು ಎಸ್ ಎಸ್ ಎಲ್ ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಸ್ ಎಂ ಎಲ್ ಎಲೆಕ್ಟ್ರಿಕ್ ಕಂಪನಿಯಲ್ಲಿ ಎಲೆಕ್ಟ್ರೀಷಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ. ಅದಕ್ಕೆ ಸಂಬಂದಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಸಾಮಾನ್ಯವಾಗಿ ಸಾಲ ಕೇಳುವವರು ಒಂದು ತಿಂಗಳ ಹಿಂದೆ ಕೇಳುತ್ತಾರೆ ಎಂದರೆ ಸರಿ. ನಾನು ಆರೋಪಿ ಒಂದು ತಿಂಗಳ ಹಿಂದೆ ಸಾಲ ಕೇಳಿರುವುದಾಗಿ ಪಿರ್ಯಾದಿಯಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ದಿಃ25.07.2020 ರಂದು ನನ್ನ ಹತ್ತಿರ ರೂ.13,00,000/- ಹಣ ಇತ್ತು ಎಂದು ತೋರಿಸಲು ದಾಖಲೆಗಳು ಇರುತ್ತವೆ ಅವುಗಳನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸುತ್ತೇನೆ. ನನಗೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಜ್ಞಾನ ಇರುತ್ತದೆ ಎಂದರೆ ಸರಿ. ನಾನು ಆರೋಪಿಗೆ ದಿಃ25.07.2020 ರಂದು ನಗದು ರೂಪದಲ್ಲಿ ರೂ.13,00,000/- ಹಣ ನೀಡಿರುತ್ತೇನೆ. ಸದರಿ ಹಣವು ರೂ.500/- ಮುಖಬೆಲೆಯ 26 ಕಟ್ಟುಗಳು ಇದ್ದವು. ನಾನು ಕಳೆದ 2022 ರಿಂದ ತೆರಿಗೆ ಪಾವತಿದಾರನಾಗಿರುತ್ತೇನೆ. ರೂ.2 ಲಕ್ಷ ಮೇಲ್ಪಟ್ಟ ವ್ಯವಹಾರಕ್ಕೆ ಬ್ಯಾಂಕಿನ RTGS ಮತ್ತು ಚೆಕ್ ಮೂಲಕ ನೀಡಬೇಕು ನಗದು ರೂಪದಲ್ಲಿ ನೀಡಬಾರದು ಎಂದು ನಿಯಮ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿ ಬೆಸ್ಕಾಂ ಇಲಾಖೆಯಲ್ಲಿ ಮೀಟರ್ ರೀಡರ್ ಆಗಿ ಕೆಲಸ ಮಾಡುತ್ತಾರೆ. ನಾನು ಸಾಲ ನೀಡಲು ಅಧಿಕೃತವಾಗಿ ಪರವಾನಗಿ ಪಡೆದಿರುವುದಿಲ್ಲ. ನಾನು ಆರೋಪಿಗೆ ಹಣ ನೀಡುವಾಗ ಆರೋಪಿಯ ತಾಯಿ ಹಾಜರು ಇದ್ದರು. ಸದರಿ ಮಾಹಿತಿಯನ್ನು ನಾನು ನನ್ನ ನೋಟೀಸು, ಪಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಆರೋಪಿ ಬೆಸ್ಕಾಂ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೆ ತಿಂಗಳಿಗೆ ರೂ.60,000/- ಸಂಬಳ ಬರುತ್ತದೆ ಎಂದರೆ ಸರಿ. ಅದೇ ರೀತಿ ಆರೋಪಿಗೆ ಜಗಳೂರಿನಲ್ಲಿ ಕೃಷಿ ಜಮೀನು ಇರುತ್ತದೆ ಎಂದರೆ ಸರಿ. ಕೈಗಡ ಸಾಲ ಎಂದರೆ ಸಾಮಾನ್ಯವಾಗಿ 10-20 ಸಾವಿರ ಕೊಟ್ಟು ತೆಗೆದುಕೊಳ್ಳುವ ಪದ್ದತಿ ಇರುತ್ತದೆ ಎಂದರೆ ಸರಿ. ನಾನು ಆರೋಪಿಗೆ ಯಾವ ಕಾರಣಕ್ಕೆ ಹಣವನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಮನೆ ಕಟ್ಟಲು ಇಟ್ಟುಕೊಂಡ ಹಣವನ್ನು ಆರೋಪಿಯ

ಮನೆಯಲ್ಲಿ ತೊಂದರೆ ಇದ್ದ ಕಾರಣ ನಾನು ನೀಡಿರುತ್ತೇನೆ. ಸದರಿ ವಿಷಯವನ್ನು ನಾನು ನನ್ನ ನೋಟೀಸು, ಪಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ನನ್ನ ಪಿರ್ಯಾದಿಯಲ್ಲಿ ಆರೋಪಿಯು ಬೇರೆಯವರಿಂದ ಪಡೆದ ಸಾಲವನ್ನು ಮರುಪಾವತಿಗಾಗಿ ನನ್ನಿಂದ ರೂ.13,00,000/- ಹಣ ಪಡೆದಿರುತ್ತಾನೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು ಆರೋಪಿಗೆ ಯಾವ ಕಾರಣಕ್ಕೆ ಬೇಕು ಎಂದು ವಿಚಾರಿಸಿ ನೀಡಿರುತ್ತೀರಾ ಎಂದರೆ ಸಾಕ್ಷಿ ಆರೋಪಿ ನನ್ನ ಅಕ್ಕನ ಮಗ ಇದ್ದ ಕಾರಣ ಆತನಿಗೆ ತೊಂದರೆ ಇದ್ದ ಕಾರಣಕ್ಕೆ ನೀಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ವಿಷಯವನ್ನು ನಾನು ನನ್ನ ನೋಟೀಸು, ಪಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ನನ್ನ ಬಳಿ SBI ಬ್ಯಾಂಕ್, ಜಗಳೂರು ಬ್ರಾಂಚ್ ಒಂದೇ ಖಾತೆ ಇರುತ್ತದೆ. ಆರೋಪಿಯ ಖಾತೆ ಕರ್ನಾಟಕ ಬ್ಯಾಂಕ್, ಹಿರಿಯೂರು ಬ್ರಾಂಚ್ ಇರುತ್ತದೆ. ನಿಪಿ1 ರಲ್ಲಿ ಇರುವ ತಿಪ್ಪೇಸ್ವಾಮಿ ಎಂಬ ಅಕ್ಷರವು ಹಾಗೂ ರೂ.13,00,000/- ಎಂದು ಇರುವ ಅಕ್ಷರಗಳಿಗೂ ಬರೆದ ಮಾದರಿ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಇರುವ ತಿಪ್ಪೇಸ್ವಾಮಿ ಎಂಬ ಅಕ್ಷರದ ಶಾಹಿ ಮತ್ತು ಉಳಿದ ಬರವಣಿಗೆ ಬೇರೆ ಶಾಹಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನಿಪಿ1 ನ್ನು ಬೇರೆ ಬೇರೆಯವರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ನ್ನು ತಜ್ಞರ ಅಭಿಪ್ರಾಯಕ್ಕೆ ಕಳುಹಿಸಿಕೊಡಲು ನನಗೆ ತಕರಾರು ಇರುವುದಿಲ್ಲ.

(ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ

ಸಿವಿಲ್ ನ್ಯಾಯಾಧೀಶರು, ಜಗಳೂರು